Inclusion of Innocent people in Murder Cases in Krishnarajanagar Taluk.

525. SRI H. VISWANATH (Krishnarajanagar).—Will the Chief Minister be pleased to state.—

(a) number of murders (yearwise) committed in Krishnarajanagar Taluk so far since 1978.

(b) whether it has come to their notice that the complaint lodged by the people's representative against the concerned Officer regarding inclusion of names of unaccused persons in the case in the pretext of murder.

(c) if so, action taken in this behalf ?

SRI R. GUNDU RAO (Chief Minister).—

(a) During 1978...1 (One)
During 1979...7 (Seven)
During 1980...so far nil

(b) Yes.

(c) After an enquiry a list of allegations against the accusee who have been found guilty have been filed in the Court.

ಶ್ರೀ ಎಚ್. ವಿಶ್ವನಾಥ್.—ಸ್ವಾಮಿ, ಇಲ್ಲಿ ನನ್ನ ಎರಡನೇ ಪ್ರಶ್ನೆಗೆ ಉತ್ತರವಾಗಿ 'ಬಂದಿದೆ, ಎಂದು ಹೇಳಿದ್ದಾರೆ. ಮತ್ತು ಕೊನೆಯ ಪ್ರಶ್ನೆಗೆ ಉತ್ತರವಾಗಿ 'ವಿಚಾರ ಮಾಡಿ ಅಪರಾಧಿಗಳೆಂದು ನಿರ್ಧರಿಸಲ್ಪಟ್ಟವರ ಮೇಲೆ ದೋಷಾರೋಪಣೆ ಪಟ್ಟಿಯನ್ನು ನ್ಯಾಯಾಲಯದಲ್ಲಿ ಸಲ್ಲಿಸಲಾಗಿದೆ ಎಂದು ಹೇಳಿದ್ದಾರೆ ಅಂದರೆ ಅಧಿಕಾರಿಗಳ ಮೇಲೆ ಏನಾದರು ದೋಷಾರೋಪಣೆಯನ್ನು ಹೊರಿಸಲಾಗಿದೆಯೇ ಹೇಗೆ ?

ಶ್ರೀ ಆರ್. ಗುಂಡೂರಾವ್. ಅಧಿಕಾರಿಗಳ ಮೇಲೆ ಅಲ್ಲ, ತಾವು ಈ ಬಗ್ಗೆ ಏನು ಅರ್ಜಿ ಕೊಟ್ಟಿದ್ದೀರಿ, ಅದರ ಮೇಲೆ ವಿಚಾರಣೆ ಮಾಡಿ ನೋಡಿದಾಗ, ಪ್ರಕರಣ ಆ ರೀತಿ ನಡೆದಿಲ್ಲವೆಂಬುದು ತಿಳಿದು ಬಂದಿದೆ. ತಾವು ಜವರೇಗೌಡರಿಗೂ ಕೊಲೆ ಪ್ರಕರಣಕ್ಕೂ ಸಂಬಂಧವಿಲ್ಲವೆಂದು ಹೇಳಿದ್ದೀರಿ. ಆದರೆ ಅವರು ಕೊಲೆ ಪ್ರಕರಣಕ್ಕೆ ಸಂಬಂಧಪಟ್ಟವರಿಗೆ ಸಹಾಯ ಮಾಡಿದ್ದಾರೆ. ಆದಕಾರಣ ಅವರ ಹೆಸರನ್ನು ಅಪರಾಧಿಗಳ ಪಟ್ಟಿಯಲ್ಲಿ ಸೇರಿಸಲಾಗಿದೆ ಎಂದು ತಿಳಿಸಲಾಗಿದೆ.

ಶ್ರೀ ಎಚ್. ವಿಶ್ವನಾಥ್.—೧೯೮೦ ರಲ್ಲಿ ಯಾವ ಕೊಲೆಯೂ ಆಗಿಲ್ಲವೆಂದು ಇಲ್ಲಿ ಹೇಳಿದ್ದಾರೆ. ಆದರೆ ಜನವರಿ ಮತ್ತು ಏಪ್ರಿಲ್ ೧೯೮೦ ರಲ್ಲಿ ಎರಡು ಕೊಲೆಗಳಾಗಿವೆ. ಆದರೂ ಕೊಲೆಗಳಾಗಿಲ್ಲ ಸಂದು ಇಲ್ಲಿ ಹೇಳಿರುವುದನ್ನು ನೋಡಿದರೆ, ಪೋಲೀಸಿನವರು ಮತ್ತು ಕೊಲೆ ಮಾಡಿದವರು ಸೇರಿಕೊಂಡು ೦ ಪ್ರಕರಣಗಳನ್ನು ಮುಚ್ಚಿಹಾಕಲು ಪ್ರಯತ್ನಪಟ್ಟಿದ್ದಾರೆಂಬ ಸಂಶಯ ನನಗೆ ಬಾದಿದೆ. ಈ ಸಂಶಯವನ್ನು ನಿವಾರಣೆ ಮಾಡಿ ನ್ಯಾಯ ದೊರಕಿಸಿಕೊಡುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಇಲ್ಲಿ ಕೊಲೆ ಆಗಿಲ್ಲವೆಂದು ಹೇಳಿಲ್ಲ. ೧೯೭೮ ರಲ್ಲಿ ಆಗಿದೆ. ೧೯೭೯ ರಲ್ಲಿ ಆಗಿದೆ, ೧೯೮೦ ರಲ್ಲಿ ನೀವು ಪ್ರಶ್ನೆ ಕೇಳಿದಾಗ ಕೊಲೆ ಆಗದಿರಬಹುದು. ಆದರೆ ಆನಂತರ ಆಗಿರಬಹುದು, ಆ ರೀತಿ ಕೊಲೆ ಏನಾದರು ಆಗಿದ್ದರೆ, ಆ ಬಗ್ಗೆ ಕೇಸ್ ರಿಜಿಸ್ಟರ್ ಮಾಡಿಕೊಂಡು ಕಾನೂನು ಪ್ರಕಾರ ಕ್ರಮ ಕೈಕೊಳ್ಳುತ್ತಾರೆ.

ಶ್ರೀ ಎಂ. ಸಿ. ಬಸಪ್ಪ.— ಸ್ವಾಮಿ, ಎರಡನೇ ಪ್ರಶ್ನೆಗೆ ಉತ್ತರವಾಗಿ 'ಹೌದು' ಎಂದು ಹೇಳಿದ್ದಾರೆ ಅಂದರೆ ಪೋಲೀಸಿನವರು ದುರುದ್ದೇಶದಿಂದ ಈ ರೀತಿ ಮಾಡುವಂತಹ ವ್ಯವಸ್ಥೆ ಏನಾದರು ಇದೆಯೇ ? I want to know whether the Police is in the habit of ncluding innocent persons in murder cases.

SRI R. GUNDU RAO.— That is not the habit of the Police Police include only the persons concerned, in the list.

Increase of Police force.

565. SRI PRABHAKAR TELKAR (Chitapur).–Will the Chief Minister be pleased to state.–

(a) the ratio of police force that bears to the population of Karnataka State ;

(b) whether the present Police Force was found to be adequate to prevent the crimes and atrocities that took place during 1978 to end of 1979:

(c) whether the Government intends to increase the Police Force to safeguard the life and property in rural areas;

(d) whether the Government is intending to increase Police Stations and Police Out posts in the State;

(e) the criteria adopted for establishing the Police Stations and Police Out posts in Rural areas ?

SRI R. GUNDU RAO (Chief Minister).—

(a) Ratio of Police Force is fixed for 10,000 population as under.—

Civil	Armed
8.3	4.1

(b) The Police Force was found to be inadequate during 1978-79.

c) Yes.

(d) Yes.

(e) The establishment of Police Station and Police Out Post in Rural areas are decided on he following.—

(i) Area.

(ii) Population.

(iii) Existence of industries employing labour resulting in Labour unrest.